## ಗಡಿನಾಡಿನಲ್ಲಿ ಗಡಿಬಿಡಿ

ಇತ್ತೀಚಿಗೆ ಬೆಳಗಾವಿಯಲ್ಲಿ ವಿಧಾನಸಭೆಯ ವಿಶೇಷ ಸಮಾವೇಶ ನಡೆಯಿತು. ಬೆಳಗಾವಿಯನ್ನು ಎಂದಿಗೂ ಬಿಡೆವು ಎಂಬ ಕೂಗು ಹೊರಟಿತು. ಅತ್ತ ಮರಾಠಿ ಜನರು ತಮ್ಮ ಪಟ್ಟನ್ನು ಸಡಲಿಸಲಾರರು. ಹೀಗಾಗಿ ಆಡುವ ಭಾಷೆ ಬೇರೆ ಬೇರೆಯಾದ ಮಾತ್ರಕ್ಕೆ ಎರಡು ರಾಜ್ಯಗಳ ಜನರ ಮಧ್ಯೆಯೇ ಮನಸ್ತಾಪ, ಕಲಹ, ಕೋಲಾಹಲ.

ಕುವೆಂಪು ಕನ್ನಡ ತಾಯಿಯನ್ನು **ಭಾರತ ಜನನಿಯ ತನುಜಾತೆ** ಎಂದು ಕರೆದು ಆರಾಧಿಸಿದರು. ಕನ್ನಡ ನಾಡಿಗೆ, ಕನ್ನಡ ನುಡಿಗೆ, ಕನ್ನಡ ಸಂಸ್ಕೃತಿಗೆ ಬೇರೆ ಏನಾದರೂ ಸ್ವತಂತ್ರ ಅಸ್ತಿತ್ವ ಇದೆಯೆ? ಅದು ಭಾರತೀಯ ನಾಡು-ನುಡಿ-ಸಂಸ್ಕೃತಿಗಳ ಅವಿಭಾಜ್ಯ ಅಂಗ ತಾನೇ? ಮಹಾರಾಷ್ಟ್ರವಾಗಲೀ, ಕೇರಳವಾಗಲೀ, ತಮಿಳುನಾಡಾಗಲೀ – ಅವುಗಳ ನಾಡು-ನುಡಿ-ಸಂಸ್ಕೃತಿಗಳೆಲ್ಲ ಭಾರತಸಂಸ್ಕೃತಿಗೆ ಸೇರಿದವುಗಳು ತಾನೇ? ಭಾರತವನ್ನು ಒಂದು ದೊಡ್ಡ ಹೂದೋಟವೆಂದುಕೊಂಡರೆ ಅದರಲ್ಲಿನ ಎಲ್ಲ ವಿಭಿನ್ನ ಜನರು, ಭಾಷೆಗಳು, ಪ್ರಾಂತಗಳು ಬಗೆ ಬಗೆಯ ಹೂವುಗಳಲ್ಲದೆ ಮತ್ತೇನು? ಈ ಬಗೆಯ ವೈವಿಧ್ಯ, ಸಮೃದ್ಧಿಗೆ ಪೂರಕವಾಗಬೇಕೇ ಹೊರತು ಮಾರಕವಾಗಬಾರದಲ್ಲವೆ?

**ವಾರ್ತಾ ವಿಶ್ಲೇಷಣೆ**

ಆದರೆ ಭಾಷಾದ್ವೇಷದ ದಳ್ಳುರಿಯು ಎರಡೂ ರಾಜ್ಯಗಳ ಜನರ ಮನಸ್ಸುಗಳಲ್ಲಿ ಹೊತ್ತಿ ಉರಿಯುತ್ತಿರುವಾಗ ಮೇಲಿನ ಸಾಮರಸ್ಯದ ಮಾತು ಅರಣ್ಯರೋದನವಾಗುವುದು ಅಷ್ಟೆ. ಕ್ಷುಲ್ಲಕ ರಾಜಕೀಯ ಹಿತಾಸಕ್ತಿಗಳಿಗಾಗಿ ರಾಷ್ಟ್ರದ ಅಖಂಡತೆ ಮತ್ತು ಸಮಗ್ರತೆಗಳಿಗೇ ಕೊಡಲಿಪೆಟ್ಟು ಹಾಕಲು ತಯಾರಾಗಿರುವ ವಿಚ್ಛದ್ರಕಾರಿ ಶಕ್ತಿಗಳ ಪ್ರಭಾವವನ್ನು ತಣಿಸುವವರು ಯಾರು? ಪ್ರಾದೇಶಿಕ ಆಕಾಂಕ್ಷೆಗಳಿಗಿಂತ ರಾಷ್ಟ್ರಹಿತ ಮುಖ್ಯ ಎಂದು ಯಾರು ತಾನೇ ಅವರಿಗೆ ಬೋಧಿಸಬಲ್ಲರು?

ಭಾಷೆಗಳು ಕೇವಲ ಸಂಪರ್ಕ ಮಾಧ್ಯಮಗಳು. ನಿಜವಾದ ಭಾಷೆ ಒಂದೇ. **ಅದು ಹೃದಯದ ಭಾಷೆ, ಪ್ರೀತಿಯ ಭಾಷೆ**. ಆ ಮಾಧ್ಯಮದಿಂದ ಮಾತ್ರವೇ ಮಾನವತೆ ಒಟ್ಟಾಗಿ ಉಳಿಯಲು ಸಾಧ್ಯ, ಬೆಳೆಯಲು ಸಾಧ್ಯ. ಇದಕ್ಕೆ ಎದುರಾಗುವ ಎಲ್ಲ ಅಡಚಣೆಗಳೂ ನಮ್ಮನ್ನು ವಿನಾಶದತ್ತ ಕೊಂಡೊಯ್ಯುತ್ತವೆ. ಒಬ್ಬ ಕನ್ನಡ ಕವಿ ಹೇಳುವಂತೆ "**ಜಾತಿ ಒಂದೇ, ಕುಲ ಒಂದೇ, ನಾವು ಮನುಜರು**".

ಮರಾಠಿಗನಾಗಲೀ, ಕನ್ನಡಿಗನಾಗಲೀ – ಮೊದಲು ಅವನು ಭಾರತೀಯ. ಈ ಭಾವನೆ ಬರದ ಹೊರತು ಈ ಪ್ರಾದೇಶಿಕ ವೈಷಮ್ಯದ ಸಮಸ್ಯೆಗೆ ಪರಿಹಾರ ಸಿಗದು. ಮರಾಠಿಗರು ಕನ್ನಡವನ್ನು ಓದಲಿ, ಕನ್ನಡಿಗರು ಮರಾಠಿಯ ಅಧ್ಯಯನ ಮಾಡಲಿ. ಆಗ ಪರಸ್ಪರ ಮನಸ್ಸುಗಳು ಒಗ್ಗೂಡುತ್ತವೆ. **ನಾವಿಬ್ಬರೂ ಭಾರತ ಜನನಿಯ ತನುಜಾತೆಯರ ಕಂದಮ್ಮಗಳೆಂಬ ಭಾವನೆ ಮೂಡುತ್ತದೆ**. ಹಾಗಾದೀತೆಂದು ಆಶಿಸೋಣವೇ?

## ಸಾರ್ವಕಾಲಿಕ ಚಲನಾ ಯಂತ್ರ

ನಿಮ್ಮ ಕಾರು ನಿಂತು ಬಿಟ್ಟಿದೆ. ಅದಕ್ಕೆ ಪೆಟ್ರೋಲ್ ಬೇಕು. ಜಗತ್ತಿನ ಪೆಟ್ರೋಲ್ ಸಂಪನ್ಮೂಲಗಳೆಲ್ಲ ಬತ್ತಿಹೋಗಿವೆ. ಎಲ್ಲೂ ಸಿಗದು. ಈಗ ಒಂದು ಗುಂಡಿ ಒತ್ತಿ. ಹೊರಗಿನ ಗಾಳಿಯಿಂದಲೇ ನಿರಂತರ ಶಕ್ತಿ ಉತ್ಪನ್ನವಾಗುತ್ತದೆ. ಕಾರು ಮತ್ತೆ ಚಲಿಸಲು ಆರಂಭಿಸುತ್ತದೆ. ಅದು ಇನ್ನು ಮುಂದೆ ನಿಲ್ಲುವುದೇ ಇಲ್ಲ. ಕನಸು ಕಾಣುತ್ತೀದೀರೇನ್ರೀ ಎನ್ನುವಿರಾ? ಇಲ್ಲ, ಸ್ವಾಮಿ. ಮುಂದೆ ಆ ಕಾಲ ಬರಬಹುದು. ಹೇಗೆ ಎಂದು ಹುಬ್ಬು ಹಾರಿಸುವಿರೇನು? ಮುಂದೆ ಓದಿ.

೮ನೆಯ ಶತಮಾನದಿಂದ ಶಕ್ತಿಯನ್ನು ಪುಕ್ಕಟೆಯಾಗಿ, ನಿರಂತರವಾಗಿ ಪಡೆಯಲು ಪ್ರಯತ್ನಗಳು ನಡೆದೇ ಇವೆ. ಆ ಕಲ್ಪನೆಯನ್ನು **ಸಾರ್ವಕಾಲಿಕ ಚಲನಾ ಯಂತ್ರ** (Perpetual Motion Machine) ಎಂದು ಕರೆಯುತ್ತಾರೆ. ಆದರೆ ಈ ಪ್ರಯತ್ನ ಇದುವರೆಗೂ ಸಫಲವಾಗಿಲ್ಲ. ಈಗಿನ Thermodynamics ತತ್ವಗಳ ಪ್ರಕಾರ ಇದು ಅಸಾಧ್ಯ. Law of Conservation of Energy ತತ್ವಕ್ಕೂ ಇದು ವಿರುದ್ಧ.

ಸ್ವಲ್ಪ ತಡೆಯಿರಿ, ಯಾವ ನಿರ್ಣಯಕ್ಕೂ ಈಗಲೇ ಬರಬೇಡಿ! ಮೇಲಿನ ನಂಬಿಕೆಗಳನ್ನು ಐರ್ಲೆಂಡ್ ದೇಶದ **ಷಾನ್ ಮೆಕಾರ್ಥಿ** ಮತ್ತು **ರಿಚರ್ಡ್ ವಾಲ್ಶಿ** ಎಂಬ ಇಬ್ಬರು ವಿಜ್ಞಾನಿಗಳು ಪ್ರಶ್ನಿಸುತ್ತಿದ್ದಾರೆ. ಅವರು ಯಾವ ಇಂಧನವೂ ಬೇಕಾಗಿಲ್ಲದ, ವಾತಾವರಣವನ್ನು ಮಲಿನಗೊಳಿಸದ, ನಿರಂತರ ಸರಬರಾಜು ಆಗುತ್ತಲೇ ಇರುವ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಯಂತ್ರವೊಂದನ್ನು ನಿರ್ಮಿಸಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಈ ಉಪಕರಣ ಕೆಲಸಮಾಡುವ ವಿಧಾನ ಬಹಳ ಸರಳ. ಹಲವು ಅಯಸ್ಕಾಂತಗಳನ್ನು ಇದರಲ್ಲಿ ಒಂದು ನಿರ್ದಿಷ್ಟ ಬಗೆಯಲ್ಲಿ ಜೋಡಿಸಿರುತ್ತಾರೆ. ಅವುಗಳು ಪರಸ್ಪರ ಆಕರ್ಷಿಸುವುದರಿಂದ ಈ ಯಂತ್ರವು ನಿರಂತರವಾಗಿ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಲೇ ಇರುತ್ತದೆ.

ಈ ಬಗೆಯ ಯಂತ್ರದ ಒಂದು ಮಾದರಿಯನ್ನು ಪ್ರಯೋಗಕ್ಕೆ ಒಳಪಡಿಸಿದಾಗ ಕಂಡುಬಂದ ಆಶ್ಚರ್ಯಕರ ಸಂಗತಿ ಏನು ಗೊತ್ತೆ? ಕಂಪ್ಯೂಟರ್ ಒಂದು ಸೆಕೆಂಡಿಗೆ ೨೮,೦೦೦ ಬಾರಿ ಲೆಕ್ಕಹಾಕಿ, ಈ ಯಂತ್ರ ಶೇ.೨೮೫ರಷ್ಟು ಕ್ಷಮತೆಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದು ನಿರ್ಧರಿಸಿತು. ಅಂದರೆ, ಒಂದು ರೂಪಾಯಿ ಬಂಡವಾಳ ಹಾಕಿದರೆ. ೨.೮೫ ರೂಪಾಯಿ ಆದಾಯ ಗಳಿಸಿದ ಹಾಗೆ. ಅದೂ ಜೀವನ ಪರ್ಯಂತ. ಯೋಜನೆ ಚೆನ್ನಾಗಿದೆ ಅಲ್ಲವೆ? ಈ ಕಂಪನಿಯ ಷೇರುಗಳಲ್ಲಿ ಈಗಾಗಲೇ ಹಣ ಹೂಡುವುದಕ್ಕೆ ಸಿದ್ಧರಾಗುತ್ತಿದ್ದೀರಾ?

ಈಗಲೇ ಈ ಯಂತ್ರ ಎಲ್ಲಿ ಸಿಕ್ಕುತ್ತೆ ಎಂದು ಮಾರುಕಟ್ಟೆಯಲ್ಲಿ ಹುಡುಕಬೇಡಿ. ಸ್ವಲ್ಪ ತಾಳಿ, ಬಹುತೇಕ ವಿಜ್ಞಾನಿಗಳು ಇದನ್ನು ಒಪ್ಪಲು ಇನ್ನೂ ತಯಾರಿಲ್ಲ. ಅಲ್ಲಿಯವರೆಗೆ ವಿದ್ಯುತ್ತಿನ ಬಿಲ್ಲನ್ನು ನೀವು ಪ್ರತಿ ತಿಂಗಳೂ ಪಾವತಿಸುತ್ತಿರಲೇಬೇಕು.

– ಎನ್.ಎಸ್. ಚಕ್ರವರ್ತಿ, ಮೈಸೂರು